ಪ್ರಜಾವಾಣಿ

## ವಿದ್ಯಾರ್ಥಿಗಳ ಸನ್ಮಾನ

ಬೆಂಗಳೂರು: ನಗರದ ಜೈನ್ ಕಾಲೇಜಿನ ವತಿಯಿಂದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಇತ್ತೀಚೆಗೆ ಸನ್ಮಾನಿಸಲಾಯಿತು.

ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಮಾತನಾಡಿ, 'ವಿದ್ಯಾರ್ಥಿಗಳು ಒತ್ತಡಕ್ಕೆ ಮಣಿದು ಭವಿಷ್ಯದ ಹಾದಿಯನ್ನು ಮೊಟಕುಗೊಳಿಸಬಾರದು' ಎಂದು ಸಲಹೆ ನೀಡಿದರು.

ಜೈನ್ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಆರ್.ಚೆನ್‌ರಾಜ್ ಜೈನ್ ಮಾತನಾಡಿ, 'ವಿದ್ಯಾರ್ಥಿಗಳು ಶ್ರದ್ಧೆ, ಶ್ರಮ ಹಾಗೂ ಸಮಯಪಾಲನೆಯೊಂದಿಗೆ ಯಶಸ್ಸಿನ ಕಡೆಗೆ ಮುನ್ನಡೆಯಬೇಕು' ಎಂದರು. ಪಿ.ಯು. ನಿರ್ದೇಶಕ (ಪ್ರೋಗ್ರಾಮ್ಸ್) ಡಾ. ಬಿ.ಟಿ. ವೆಂಕಟೇಶ್ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ 12 ವಿದ್ಯಾರ್ಥಿಗಳಿಗೆ ಪ್ರಶಸ್ತಿಪತ್ರ ಹಾಗೂ ಪದಕ ಪ್ರದಾನ ಮಾಡಲಾಯಿತು.